ಪ್ರಜಾವಾಣಿ

## ತಾಂತ್ರಿಕ ಶಿಕ್ಷಣ ಮಂಡಳಿ ಸದಸ್ಯ ಕಾರ್ಯದರ್ಶಿ ರಾಜೀವ್ ಕುಮಾರ್ ಅಭಿಮತ

# ‘ಭಾರತೀಯ ಜ್ಞಾನ ಪರಂಪರೆ ಅರಿವು ಅಗತ್ಯ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಭಾರತೀಯ ಜ್ಞಾನ ಪರಂಪರೆಯನ್ನು ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ತಿಳಿಸಬೇಕಿದೆ’ ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಸದಸ್ಯ ಕಾರ್ಯದರ್ಶಿ ಪ್ರೊ.ರಾಜೀವ್ ಕುಮಾರ್ ಹೇಳಿದರು.

ಬನ್ನೂರು ರಸ್ತೆಯ ಎಟಿಎಂಇ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ವಾರಾಣಸಿಯ ಅಂತರ ವಿಶ್ವವಿದ್ಯಾಲಯ ಶಿಕ್ಷಕ ಶಿಕ್ಷಣ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ‘ಭಾರತೀಯ ಜ್ಞಾನ ಪರಂಪರೆ’ ಕುರಿತ ರಾಷ್ಟ್ರಮಟ್ಟದ ಶೈಕ್ಷಣಿಕ ಸಿಬ್ಬಂದಿ ಅಭಿವೃದ್ಧಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

‘ಪ್ರಾದೇಶಿಕ ಭಾಷೆಗಳಲ್ಲಿ ದೇಶದ ಜ್ಞಾನದ ಪರಂಪರೆಯನ್ನು ತಿಳಿಸಲು ರಾಷ್ಟ್ರೀಯ ಶಿಕ್ಷಣ ನೀತಿ–2020 ರೂಪುಗೊಂಡಿದೆ. ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮದ ಮೂಲಕ ಜಾರಿಗೊಳಿಸಲಾಗುತ್ತಿದೆ’ ಎಂದರು.



ಮೈಸೂರಿನ ಎಟಿಎಂಇ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಾಗಾರವನ್ನು ಪ್ರೊ.ರಾಜೀವ್ ಕುಮಾರ್ ಉದ್ಘಾಟಿಸಿದರು. ಪ್ರೊ.ಆಶಿಶ್ ಶ್ರೀವಾಸ್ತವ, ಕೆ.ಎನ್.ಶ್ರೀಕೃಷ್ಣ ಪ್ರಸಾದ್, ವೀರೇಶಾನಂದ ಸರಸ್ವತಿ ಸ್ವಾಮೀಜಿ, ಎಲ್. ಅರುಣ್ ಕುಮಾರ್, ಪ್ರೊ.ಶೋಭಿತಾ ಸತೀಶ್, ರವೀಂದ್ರ, ಪ್ರೊ.ರವಿಶಂಕರ್ ಶೆಣೈ ಪಾಲ್ಗೊಂಡಿದ್ದರು

‘ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ಅಧ್ಯಾಪಕರು ಬೋಧನಾ ವಿಧಾನಗಳನ್ನು ಸಮರ್ಪಕವಾಗಿ ಅರಿತುಕೊಳ್ಳಬೇಕು. ಕೌಶಲ ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕು’ ಎಂದು ಸಲಹೆ ನೀಡಿದರು.

ತುಮಕೂರು ರಾಮಕೃಷ್ಣ ಆಶ್ರಮದ ವೀರೇಶಾನಂದ ಸರಸ್ವತಿ ಸ್ವಾಮೀಜಿ ಮಾತನಾಡಿ, ‘ಸ್ವಾತಂತ್ರ್ಯ ನಂತರ ದೇಶದ ಪರಂಪರೆ, ಸಂಸ್ಕೃತಿಯನ್ನು ಶಿಕ್ಷಣದ ಮೂಲಕ ಭಾರತೀಯರಿಗೆ ಸರಿಯಾಗಿ ತಲುಪಿಸಿಲ್ಲ. ಈ ಹಿನ್ನಡೆಯನ್ನು ಮೀರಬೇಕಾದ ತುರ್ತು ಪ್ರತಿಯೊಬ್ಬ ಶಿಕ್ಷಕರಲ್ಲೂ ಇರಬೇಕಾಗುತ್ತದೆ’ ಎಂದು ಹೇಳಿದರು.

‘ಮೆಕಾಲೆ ಶಿಕ್ಷಣ ನೀತಿಯೇ ಇನ್ನೂ ಜಾರಿಯಲ್ಲಿದೆ. ಭಾರತೀಯ ಭಾಷೆ, ಸಂಸ್ಕೃತಿ, ಸಂಪ್ರದಾಯಗಳಿಗೆ ಮಹತ್ವ ಸಿಕ್ಕಿಲ್ಲ. ಇಂಗ್ಲಿಷ್‌ನಿಂದ ಜ್ಞಾನ ಪರಂಪರೆ ನಶಿಸಿಹೋಗಿದೆ’ ಎಂದರು.

ವಾರಾಣಸಿಯ ಅಂತರ ವಿಶ್ವವಿದ್ಯಾಲಯ ಶಿಕ್ಷಕ ಶಿಕ್ಷಣ ಕೇಂದ್ರದ ಪ್ರೊ.ಆಶಿಶ್ ಶ್ರೀವಾಸ್ತವ, ಪ್ರೊ.ಶೋಭಿತಾ ಸತೀಶ್, ಕೆ.ಎನ್. ಶ್ರೀಕೃಷ್ಣ ಪ್ರಸಾದ್, ಎಟಿಎಂಇ ಆಡಳಿತ ಮಂಡಳಿ ಅಧ್ಯಕ್ಷ ಎಲ್.ಅರುಣ್ ಕುಮಾರ್, ಆರ್‌ಎಸ್‌ಎಸ್ ಪ್ರಚಾರಕ ರವೀಂದ್ರ, ಮಣಿಪಾಲ್ ಸಂಸ್ಥೆಯ ಪ್ರೊ. ರವಿಶಂಕರ್ ಶೆಣೈ ಪಾಲ್ಗೊಂಡಿದ್ದರು.